**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012.**

ಸಂಖ್ಯೆ:ಪ.ಪೂ.ಶಿ/ದ್ವಿ.ಪ್ರ.ಆನ್/2021–22. ದಿನಾಂಕ:20–09–2021.

**:: ಸುತ್ತೋಲೆ ::**

ವಿಷಯ: ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ದ್ವಿತೀಯ/ತೃತೀಯ ಅಂಕಪಟ್ಟಿ ಪಡೆಯುವ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರ ನಿರ್ವಹಿಸುವ ಬಗ್ಗೆ.

* * * * * *

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ತಮ್ಮ ಮೂಲ ಅಂಕಪಟ್ಟಿಯನ್ನು ಕಳೆದುಕೊಂಡಲ್ಲಿ ಅಂತಹ ವಿದ್ಯಾರ್ಥಿಗಳು ದ್ವಿತೀಯ/ತೃತೀಯ ಅಂಕಪಟ್ಟಿ/ಪ್ರಮಾಣಪತ್ರ ಪಡೆಯಲು ಪ್ರಸ್ತುತ ಅರ್ಜಿಯನ್ನು ಭೌತಿಕವಾಗಿ ಸ್ವೀಕರಿಸಿ ಇತ್ಯರ್ಥಪಡಿಸಲಾಗುತ್ತಿದ್ದು, ಸದರಿ ಸೇವೆಯನ್ನು ದಿನಾಂಕ: 22–09–2021 ರಿಂದ ಆನ್‌ಲೈನ್ ಮುಖಾಂತರ ನಿರ್ವಹಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ.

**: ದ್ವಿತೀಯ/ತೃತೀಯ ಅಂಕಪಟ್ಟಿ/ಪ್ರಮಾಣ ಪತ್ರವನ್ನು ಪಡೆಯಲು ಪ್ರಸ್ತುತ ಚಾಲ್ತಿಯಲ್ಲಿರುವ ವಿಧಾನ :**

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ದ್ವಿತೀಯ/ತೃತೀಯ ಅಂಕಪಟ್ಟಿಯನ್ನು ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು, ಇಲಾಖೆಯು ನಿಗಧಿಪಡಿಸಿರುವ ಅರ್ಜಿ ನಮೂನೆಯಲ್ಲಿ ಅಗತ್ಯ ಮಾಹಿತಿಯನ್ನು ನಮೂದಿಸಿ, ಅಭ್ಯರ್ಥಿಯು ಸಹಿ ಮಾಡಿ, ಸಂಬಂಧಿಸಿದ ಕಾಲೇಜು ಪ್ರಾಂಶುಪಾಲರ ಮುಖಾಂತರ ಅಗತ್ಯ ದಾಖಲೆ ಮತ್ತು ನಿಗಧಿತ ಶುಲ್ಕದೊಂದಿಗೆ ಪ್ರಸ್ತಾವನೆಯನ್ನು ಇಲಾಖೆಗೆ ಅಂಚೆ ಮೂಲಕ ಸಲ್ಲಿಸಬೇಕಾಗಿತ್ತು. ಕಛೇರಿಯಲ್ಲಿ ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳಿಗೆ ಅಂಕಪಟ್ಟಿಯನ್ನು ಅಂಚೆ ಮೂಲಕ ಸಂಬಂಧಪಟ್ಟ ಕಾಲೇಜುಗಳಿಗೆ ರವಾನಿಸಲಾಗುತ್ತಿತ್ತು. ಇದರಿಂದ ವಿದ್ಯಾರ್ಥಿಗಳು ಸದರಿ ಪ್ರಮಾಣ ಪತ್ರವನ್ನು ಪಡೆಯಲು ಹೆಚ್ಚಿನ ಕಾಲಾವಕಾಶ ಬೇಕಾಗುತ್ತಿತ್ತು. ಈ ರೀತಿಯ ಪತ್ರ ವ್ಯವಹಾರವನ್ನು ತಡೆಗಟ್ಟಿ ಸದರಿ ಸೇವೆಯನ್ನು ಆನ್‌ಲೈನ್ ಮೂಲಕ ನೀಡುವುದು ಸೂಕ್ತವೆಂದು ಮನಗಂಡು ವಿದ್ಯಾರ್ಥಿಗಳಿಗೆ ಇನ್ನು ಮುಂದೆ ಈ ನೂತನ ಸೌಲಭ್ಯವನ್ನು ಕಲ್ಪಿಸಲಾಗಿದೆ.

**: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ದ್ವಿತೀಯ/ತೃತೀಯ ಅಂಕಪಟ್ಟಿ/ಪ್ರಮಾಣಪತ್ರ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ವಿಧಾನ :**

ದ್ವಿತೀಯ ಪಿಯುಸಿಯ ದ್ವಿತೀಯ/ತೃತೀಯ ಅಂಕಪಟ್ಟಿ/ಪ್ರಮಾಣ ಪತ್ರವನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಾಲತಾಣ http://www.pue.kar.nic.in ರ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ನಿಗಧಿತ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಲು ಸದರಿ ಜಾಲತಾಣದಲ್ಲಿಯೇ ಅವಕಾಶ ಮಾಡಿಕೊಡಲಾಗಿರುತ್ತದೆ.

ಇಲಾಖೆಯು ನಿಗಧಿಪಡಿಸಿರುವ ಶುಲ್ಕವನ್ನು ON-LINE ಮೂಲಕ ಪಾವತಿಸಿದಲ್ಲಿ ಸೇವಾ ಶುಲ್ಕ ರೂ.10/- ಹೆಚ್ಚುವರಿಯಾಗಿ ಪಾವತಿಸಬೇಕಾಗಿರುತ್ತದೆ. ನಂತರ ಈ ಕಛೇರಿಯಲ್ಲಿ ಈ ರೀತಿ ಬಂದಂತಹ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಾಮಾನ್ಯ ಸೇವೆಗೆ 15 ಕೆಲಸದ ದಿನಗಳಲ್ಲಿ ಪ್ರಕ್ರಿಯೆಗೊಳಿಸಿ ಅಂಕಪಟ್ಟಿ/ಪ್ರಮಾಣ ಪತ್ರವನ್ನು ಸಂಬಂಧಿಸಿದ ಕಾಲೇಜಿಗೆ ರವಾನಿಸಲಾಗುವುದು. ಈ ಕುರಿತು ಅಭ್ಯರ್ಥಿಗೆ ಎಸ್‌ಎಂಎಸ್ ಮೂಲಕ ಮಾಹಿತಿ ನೀಡಲಾಗುವುದು.

**ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ.**

1. **ಅಭ್ಯರ್ಥಿಗಳು ಅನುಸರಿಸಬೇಕಾದ ಕ್ರಮಗಳು :** ದ್ವಿತೀಯ ಪಿಯುಸಿ ಅಂಕಪಟ್ಟಿ/ಪ್ರಮಾಣ ಪತ್ರದ ದ್ವಿತೀಯ ಮತ್ತು ತೃತೀಯ ಪ್ರತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಇಲಾಖೆಯ ಜಾಲತಾಣ http://www.pue.kar.nic.in ದಲ್ಲಿ ನೀಡಲಾಗಿರುವ Online Services ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಪೂರ್ವದಲ್ಲಿ ನಿರ್ದೇಶಕರಿಗೆ ಬರೆದಂತಹ ಕೋರಿಕೆ ಪತ್ರ, ಅಫಿಡವಿಟ್ (ಮಾದರಿ ನಮೂನೆಗಳನ್ನು ಇಲಾಖೆಯ ಜಾಲತಾಣದಲ್ಲಿ ನೀಡಲಾಗಿದೆ) ಮತ್ತು ಅಂಕಪಟ್ಟಿಯ ಪ್ರತಿಯನ್ನು 200 kb ಯಿಂದ 01 mb ಯಲ್ಲಿ ಪಿಡಿಎಫ್ ನಮೂನೆಯಲ್ಲಿ ಸ್ಕ್ಯಾನ್ ಮಾಡಿಟ್ಟುಕೊಂಡು ಅರ್ಜಿ ಸಲ್ಲಿಸುವುದು. ವಿವರಗಳನ್ನು ಭರ್ತಿ ಮಾಡಿ ದಾಖಲೆಗಳನ್ನು (ಅರ್ಜಿ ಪತ್ರ, ಅಫಿಡವಿಟ್ ಮತ್ತು ಲಭ್ಯವಿದ್ದಲ್ಲಿ ಅಂಕಪಟ್ಟಿಯ ಪ್ರತಿ) ಅಪ್ಲೋಡ್ ಮಾಡಿದ ನಂತರ ನಿಗಧಿ ಪಡಿಸಿದ ಸೇವಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸುವುದು. ಅಪ್ಲೋಡ್ ಮಾಡಿದ ದಾಖಲೆಗಳ ಮೂಲ ಪ್ರತಿಗಳನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸುವುದು.

2. **ಕಾಲೇಜಿನ ಪ್ರಾಂಶುಪಾಲರು ಅನುಸರಿಸಬೇಕಾದ ಕ್ರಮಗಳು :** ದ್ವಿತೀಯ ಪಿಯುಸಿಯ ದ್ವಿತೀಯ/ತೃತೀಯ ಪ್ರತಿಯ ಅಂಕಪಟ್ಟಿಗಾಗಿ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸಿದ ಮೂಲ ದಾಖಲೆಗಳನ್ನು ಆಯಾ ಕಾಲೇಜಿನ ಪ್ರಾಂಶುಪಾಲರು ಕಾಲೇಜಿನಲ್ಲಿ ಸಂರಕ್ಷಿಸಿಡುವುದು. ವಿದ್ಯಾರ್ಥಿಗೆ ಅಂಕಪಟ್ಟಿ ವಿತರಣೆ ಮಾಡುವಾಗ ಅರ್ಜಿಯ ಮೂಲ ದಾಖಲೆಗಳನ್ನು ಕಾಲೇಜಿಗೆ ಸಲ್ಲಿಸಿರುವುದನ್ನು ಖಚಿತಪಡಿಕೊಂಡು ಅಂಕಪಟ್ಟಿ/ಪ್ರಮಾಣಕ್ಕೆ ಮೊಹರನ್ನು ಮುದ್ರಿಸಿ ಸಹಿ ಮಾಡಿ ವಿತರಿಸುವುದು. ಕಾಲೇಜಿನ ಪ್ರಾಂಶುಪಾಲರು ಅಭ್ಯರ್ಥಿಗಳಿಂದ ಪಡೆದಂತಹ ಮೂಲ ದಾಖಲೆಗಳನ್ನು ಕಾಲೇಜಿನಲ್ಲಿ ಸಂರಕ್ಷಿಸಿ ಇಡುವುದು ಮತ್ತು ಇಲಾಖೆಯು ಇಚ್ಛಿಸಿದ ಸಮಯದಲ್ಲಿ ಒದಗಿಸುವುದು.

3. **ಇಲಾಖೆಯ ಹಂತದಲ್ಲಿ ಶಾಖೆಯಲ್ಲಿ ಅನುಸರಿಸಬೇಕಾದ ಕ್ರಮಗಳು :** ದ್ವಿತೀಯ ಪಿಯುಸಿಯ ದ್ವಿತೀಯ, ತೃತೀಯ ಪ್ರತಿಯ ಅಂಕಪಟ್ಟಿಗಾಗಿ ಕಾಲೇಜಿನ ಪ್ರಾಂಶುಪಾಲರು ಪ.ಪೂ.ಶಿ ಇಲಾಖೆಯ ಲಾಗಿನ್‌ನಿಂದ Forward ಆದಂತಹ ಅರ್ಜಿಗಳು ಲಾಗಿನ್‌ನಲ್ಲಿ ಲಭ್ಯವಿದ್ದು, ಅವುಗಳನ್ನು ಪರಿಶೀಲಿಸಿ ಅರ್ಹ ಪ್ರಸ್ತಾವನೆಗಳನ್ನು ಸಾಮಾನ್ಯ ಸೇವೆಯಡಿ 15 ಕೆಲಸದ ದಿನಗಳೊಳಗಾಗಿ ವಿಲೇವಾರಿ ಮಾಡುವುದು. ಅಭ್ಯರ್ಥಿಯು ಅಪ್ಲೋಡ್ ಮಾಡಿದ ದಾಖಲೆಗಳನ್ನು ಡೌನ್ಲೋಡ್ ಮಾಡಿಕೊಂಡು ಪರಿಶೀಲಿಸಿ ಅರ್ಜಿಯ Statusಅನ್ನು ಅಪ್ಡೇಟ್ ಮಾಡುವುದು. ಅಂದರೆ, ಅಂಕಪಟ್ಟಿಯನ್ನು ವಿತರಣೆ ಮಾಡಿದಲ್ಲಿ ಅಂಕಪಟ್ಟಿಯ ಕ್ರಮ ಸಂಖ್ಯೆ ಮತ್ತು ವಿತರಣೆ ಮಾಡಿದ ದಿನಾಂಕವನ್ನು ನಮೂದಿಸುವುದು. ಒಂದು ವೇಳೆ Reject ಮಾಡುವುದಾದರೆ, ಸೂಕ್ತ ಕಾರಣದೊಂದಿಗೆ Reject ಮಾಡುವುದು. Reject ಮಾಡಿದ

ಅಭ್ಯರ್ಥಿಗೆ ಸರಿಯಾದ ದಾಖಲೆಗಳನ್ನು Re-Upload ಮಾಡುವಂತೆ ಸೂಚಿಸುವುದು. ಅಭ್ಯರ್ಥಿಯು ಸರಿಯಾದ ದಾಖಲೆಗಳೊಂದಿಗೆ Re-Upload ಮಾಡಲು ಅವಕಾಶವಿರುತ್ತದೆ.

ಇಲಾಖೆಯು ಒದಗಿಸುತ್ತಿರುವ ವಿವಿಧ ಸೇವೆಗಳನ್ನು ಡಿಜಿಟಲ್ ಪ್ರಕ್ರಿಯೆಗೆ ಒಳಪಡಿಸುತ್ತಿದ್ದು, ಸದ್ಯ ದ್ವಿತೀಯ ಪಿ.ಯು.ಸಿ ಅಂಕಪಟ್ಟಿ/ಪ್ರಮಾಣ ಪತ್ರ (ದ್ವಿತೀಯ ಮತ್ತು ತೃತೀಯ) ಪಡೆಯುವ ಸೇವೆಯನ್ನು ಆನ್‌ಲೈನ್ ಪ್ರಕ್ರಿಯೆಗೆ ಒಳಪಡಿಸಲಾಗಿದೆ. ಈ ಬಗ್ಗೆ ಅಭ್ಯರ್ಥಿಗಳಿಗೆ/ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ನೀಡುವುದು. ಸದರಿ ಸೇವೆಯನ್ನು ಆನ್‌ಲೈನ್ ಪ್ರಕ್ರಿಯೆಗೊಳಪಡಿಸಿದರೂ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಈ ಪ್ರಕ್ರಿಯೆ ಜೊತೆಗೆ ಮುಂದಿನ ಸೂಚನೆಯವರೆಗೆ ಈ ಹಿಂದಿನ ವಿಧಾನದಲ್ಲಿ ಅಭ್ಯರ್ಥಿಗಳು ಭೌತಿಕವಾಗಿ ಅರ್ಜಿ ಸಲ್ಲಿಸಿದಲ್ಲಿ ಸೇವೆಯನ್ನು ಒದಗಿಸಲಾಗುವುದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

<u>ಪ್ರತಿಯನ್ನು:</u>

1. ರಾಜ್ಯದ ಎಲ್ಲಾ ಉಪ ನಿರ್ದೇಶಕರ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳ ಪ್ರಾಂಶುಪಾಲರಿಗೆ.